ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 06-03-1997.

# *ಶಿವಜಯಂತಿಯ ಉಡುಗೊರೆ- ಪರಿಶ್ರಮವನ್ನು ಬಿಟ್ಟು ಪ್ರೀತಿಯ ಉಯ್ಯಾಲೆಯಲ್ಲಿ ತೂಗಿರಿ*

(शिवजयन्ती की गिफ्ट- मेहनत को छोड़ मुहब्बत के झूले में झूलो)

ಇಂದು ಸ್ವಯಂ ಶಿವ ತಂದೆ ತನ್ನ ನಾಲ್ಕಾರು ಕಡೆಯಿಂದ ಬಂದಿರುವಂತಹ ಮಕ್ಕಳಿಂದ ತಮ್ಮ ಜಯಂತಿಯನ್ನು ಆಚರಿಸಲು ಬಂದಿದ್ದಾರೆ. ಮಕ್ಕಳದು ಎಷ್ಟು ಭಾಗ್ಯವಿದೆ? ಸ್ವಯಂ ತಂದೆ ಮಿಲನ ಮಾಡಲು ಮತ್ತು ಆಚರಿಸಲು ಬಂದಿದ್ದಾರೆ. ಪ್ರಪಂಚದವರಂತು ಕರೆಯುತ್ತಿರುತ್ತಾರೆ - ಬನ್ನಿ, ಯಾವಾಗ ಬರುವಿರಿ, ಯಾವ ರೂಪದಲ್ಲಿ ಬರುವಿರಿ ಎಂದು ಆಹ್ವಾನ ಮಾಡುತ್ತಿರುತ್ತಾರೆ ಮತ್ತು ಮಕ್ಕಳಾದ ನಿಮ್ಮೊಂದಿಗೆ ಸ್ವಯಂ ತಂದೆ ಆಚರಿಸಲು ಬಂದಿದ್ದಾರೆ. ಇಂತಹ ವಿಚಿತ್ರ ದೃಶ್ಯ ಎಂದೂ ಸ್ವಪ್ನದಲ್ಲಿಯೂ ಯೋಚಿಸಿರುವುದಿಲ್ಲ, ಆದರೆ ಸಾಕಾರ ರೂಪದಲ್ಲಿ ಆಚರಿಸಲು ಓಡೋಡಿ ತಲುಪಿ ಬಿಟ್ಟಿದ್ದೀರಿ. ತಂದೆಯೂ ನಾಲ್ಕಾರು ಕಡೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಾರೆ - ವಾಹ್ ಸಾಲಿಗ್ರಾಮ ಮಕ್ಕಳೇ ವಾಹ್! ವಾಹ್ ಸಾಕಾರ ಸ್ವರೂಪಧಾರಿ ಯೋಗ್ಯ ಫರಿಶ್ತೆಗಳಿಂದ ದೇವತೆಗಾಳಾಗುವಂತಹ ಮಕ್ಕಳು ವಾಹ್! ಭಕ್ತ ಮಕ್ಕಳು ಮತ್ತು ನೀವು ಜ್ಞಾನಿ ಆತ್ಮರಲ್ಲಿ ಎಷ್ಟೊಂದು ಅಂತರವಿದೆ. ಭಕ್ತರು ಭಾವನೆಯ, ಅಲ್ಪಕಾಲದ ಫಲವನ್ನು ಪಡೆದು ಖುಷಿಯಾಗುತ್ತಾರೆ. ವಾಹ್ ವಾಹ್ ಎಂಬ ಗೀತೆಯನ್ನು ಹಾಡುತ್ತಾರೆ ಮತ್ತು ಜ್ಞಾನಿ ಆತ್ಮರಾದ ನೀವು ಸ್ವಲ್ಪ ಅಲ್ಪಕಾಲದ ಫಲವಲ್ಲ ಆದರೆ ತಂದೆಯಿಂದ ಪೂರ್ಣ ಆಸ್ತಿಯನ್ನು ತೆಗೆದುಕೊಂಡು, ಆಸ್ತಿಗೆ ಅಧಿಕಾರಿಯಾಗಿ ಬಿಡುತ್ತೀರಿ. ಅಂದಾಗ ಭಕ್ತ ಮಕ್ಕಳು ಮತ್ತು ನೀವು ಜ್ಞಾನಿ  ಮಕ್ಕಳಲ್ಲಿ ಎಷ್ಟು ಅಂತರವಿದೆ. ಭಕ್ತರು ಆಚರಿಸುತ್ತಾರೆ ಮತ್ತು ನೀವು ಮಕ್ಕಳು ಆಚರಿಸಲು ಬಂದಿದ್ದೀರಿ, ಆದರೆ ಆಚರಿಸುವುದರಲ್ಲಿ ಎಷ್ಟೊಂದು ಅಂತರವಿದೆ. ಶಿವಜಯಂತಿಯನ್ನು ಆಚರಿಸಲು ಬಂದಿದ್ದೀರಲ್ಲವೇ! ಓಡೋಡಿ ಬಂದಿದ್ದೀರಿ, ಕೆಲವರು ಅಮೇರಿಕಾದಿಂದ, ಕೆಲವರು ಲಂಡನ್ನಿಂದ, ಕೆಲವರು ಆಸ್ಟ್ರೇಲಿಯಾದಿಂದ, ಕೆಲವರು ಏಷಿಯಾದಿಂದ, ಎಷ್ಟು ಸ್ನೇಹದಿಂದ ಬಂದು ತಲುಪಿದ್ದೀರಿ. ತಂದೆಯ ಜಯಂತಿಯ ಜೊತೆಯಲ್ಲಿ ಮಕ್ಕಳ ಜಯಂತಿಯೂ ಆಗಿದೆ, ತಂದೆಯ ಜೊತೆಯಲ್ಲಿ ಮಕ್ಕಳ ಜಯಂತಿಯದ್ದೂ ಶುಭಾಷಯಗಳು, ಶುಭಾಷಯಗಳು, ಶುಭಾಷಯಗಳು. ಏಕೆಂದರೆ ತಂದೆಯೊಬ್ಬರೇ ಈ ಸಾಕಾರ ಪ್ರಪಂಚದಲ್ಲಿ ಮಕ್ಕಳಿಲ್ಲದೇ ಯಾವುದೇ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ. ಮಕ್ಕಳೊಂದಿಗೆ ಇಷ್ಟೊಂದು ಪ್ರೀತಿಯಿದೆ. ಒಬ್ಬರೇ ಮಾಡಲು ಸಾಧ್ಯವೇ ಇಲ್ಲ. ಮೊದಲು ಮಕ್ಕಳನ್ನು ನಿಮಿತ್ತರನ್ನಾಗಿ ಮಾಡುತ್ತಾರೆ ನಂತರ ಬೆನ್ನೆಲುಬಾಗಿ ಅಥವಾ ಕಂಬೈಂಡ್ ಆಗಿ, ಮಾಡಿಸುವಂತಹವರಾಗಿ ನಿಮಿತ್ತ ಮಕ್ಕಳಿಂದ ಮಾಡಿಸುತ್ತಾರೆ. ಸಾಕಾರ ಪ್ರಪಂಚದಲ್ಲಿ ಒಬ್ಬರೇ, ಮಕ್ಕಳಿಲ್ಲದೇ ಇರುವುದಿಲ್ಲ. ನಿರಾಕಾರಿ ಪ್ರಪಂಚದಲ್ಲಂತು ನೀವು ಮಕ್ಕಳು ತಂದೆಯನ್ನು ಬಿಟ್ಟು ಒಬ್ಬರೇ ಹೋಗಿ ಬಿಡುತ್ತೀರಿ. ತಂದೆಯ

ಆಜ್ಞೆಯಿಂದಲೇ ಹೋಗುತ್ತೀರಿ ಆದರೆ ಸಾಕಾರ ಪ್ರಪಂಚದಲ್ಲಿ ತಂದೆ ಮಕ್ಕಳಿಲ್ಲದೇ ಇರಲು ಸಾಧ್ಯವಿಲ್ಲ. ಮಕ್ಕಳು ಅವಶ್ಯವಾಗಿ ಜೊತೆ ಬೇಕು. ಜೊತೆಯಲ್ಲಿರುತ್ತೇವೆ, ಜೊತೆಯಲ್ಲಿ ಹೋಗುತ್ತೇವೆ ಎಂದು ಮಕ್ಕಳ ಪ್ರತೀಜ್ಞೆಯನ್ನು ಮಾಡುತ್ತಿದ್ದಾರೆ ಆದರೆ ಕೇವಲ ನಿರಾಕಾರಿ ಪ್ರಪಂಚದವರೆಗೆ.

ಬಾಪ್‌ದಾದಾರವರು ನೋಡುತ್ತಿದ್ದರು - ಎಲ್ಲಾ ಮಕ್ಕಳಿಗೆ ತಂದೆಯ ಜಯಂತಿಯನ್ನು ಆಚರಿಸುವ ಎಷ್ಟು ಉತ್ಸಾಹ-ಉಲ್ಲಾಸವಿದೆ. ತಂದೆಯನ್ನು ನೋಡಿ ಮಕ್ಕಳ ಸ್ನೇಹದಲ್ಲಿ ನಿಮ್ಮ ಜೊತೆ ಸಾಕಾರ ಶರೀರದ ಆಧಾರ(ಲೋನ್) ತೆಗೆದುಕೊಂಡು ತಲುಪಿಬಿಟ್ಟಿದ್ದಾರೆ. ಇದಕ್ಕೆ ಅಲೌಕಿಕ ಪ್ರೀತಿಯೆಂದು ಹೇಳಲಾಗುತ್ತದೆ. ಮಕ್ಕಳು ತಂದೆಯಿಲ್ಲದೇ ಇರಲು ಸಾಧ್ಯವಿಲ್ಲ ಮತ್ತು ತಂದೆ ಮಕ್ಕಳಿಲ್ಲದೇ ಇರಲು ಸಾಧ್ಯವಿಲ್ಲ. ಪ್ರೀತಿಯು ಬಹಳಷ್ಟಿದೆ ಮತ್ತು ಅತೀತ(ಭಿನ್ನ) ಸ್ಥಿತಿಯೂ ಬಹಳಷ್ಟಿದೆ ಅದಕ್ಕೆ ತಂದೆಯ ಮಹಿಮೆಯೇ ಆಗಿದೆ ಅತೀತ ಮತ್ತು ಪ್ರಿಯರು. ಮಕ್ಕಳು ತಂದೆಗೆ ಅನೇಕ ಪ್ರಕಾರದ ಗಿಫ್ಟ್ ಯಾವುದೇ ಕಾರ್ಡ್, ಯಾವುದೇ ವಸ್ತು, ಹೃದಯದ ಉಮಂಗದ ಪತ್ರ, ಏನೆಲ್ಲಾ ತೆಗೆದುಕೊಂಡು ಬಂದಿದ್ದೀರೋ ತಂದೆಯ ಹತ್ತಿರ ಇಂದು ವತನದಲ್ಲಿ ಎಲ್ಲಾ ಉಡುಗೊರೆಗಳ ಮ್ಯೂಸಿಯಂ ಇಡಲಾಗಿದೆ. ನಿಮ್ಮ ಮ್ಯೂಸಿಯಂ ಸೇವೆಯದಾಗಿದೆ ಮತ್ತು ತಂದೆಯ ಮ್ಯೂಸಿಯಂ ಸ್ನೇಹದ್ದಾಗಿದೆ. ಏನೆಲ್ಲಾ ತಂದಿದ್ದೀರಿ ಅಥವಾ ಕಳುಹಿಸಿದ್ದೀರಿ ಎಲ್ಲರ ಸ್ನೇಹ ಸಂಪನ್ನ ಗಿಫ್ಟ್ ತಂದೆಯ ಹತ್ತಿರ ಈಗಲೂ ಮ್ಯೂಸಿಯಂನಲ್ಲಿ ಇಡಲಾಗಿದೆ. ಅದನ್ನು ನೋಡಿ ತಂದೆ ಹರ್ಷಿತರಾಗುತ್ತಾರೆ. ವಸ್ತುವು ದೊಡ್ಡದಾಗಿಲ್ಲ ಆದರೆ ಯಾವಾಗ ವಸ್ತುವಿನಲ್ಲಿ ಸ್ನೇಹ ತುಂಬಿರುತ್ತದೆಯೋ ಆಗ ಆ ಚಿಕ್ಕ ವಸ್ತುವು ಬಹಳ ಮಹಾನ್ ಆಗಿ ಬಿಡುತ್ತದೆ. ಬಾಪ್‌ದಾದಾರವರು ವಸ್ತುವನ್ನು ನೋಡುವುದಿಲ್ಲ, ಪೇಪರಿನ ಕಾರ್ಡ್ ಅಥವಾ ಪತ್ರವನ್ನು ನೋಡುವುದಿಲ್ಲ ಆದರೆ ಅದರಲ್ಲಿ ಸಮಾವೇಶವಾಗಿರುವ ಹೃದಯದ ಸ್ನೇಹವನ್ನು ನೋಡುತ್ತಾರೆ. ಅದಕ್ಕೆ ಹೇಳಲಾಗುತ್ತದೆ ತಂದೆಯ ಹತ್ತಿರ ಸ್ನೇಹದ ಮ್ಯೂಸಿಯಂ ಇದೆ. ಇಂತಹ ಮ್ಯೂಸಿಯಂ ನಿಮ್ಮ ಪ್ರಪಂಚದಲ್ಲಿ ಇಲ್ಲ. ಇಂತಹ ಮ್ಯೂಸಿಯಂ ಇದೆಯೇ? ಇಲ್ಲ. ತಂದೆಯು ಒಂದೊಂದು ಪ್ರೀತಿಯ ಗಿಫ್ಟನ್ನು ನೋಡುತ್ತಿದ್ದಂತೆಯೇ ಮಕ್ಕಳ ಮುಖ ಅದರಲ್ಲಿ ಕಾಣಿಸುತ್ತದೆ. ಇಂತಹ ಕ್ಯಾಮರಾ ನಿಮ್ಮ ಹತ್ತಿರ ಇದೆಯೇ? ಇಲ್ಲ. ಗಿಫ್ಟನ್ನು ನೋಡುತ್ತಿದ್ದಂತೆಯೇ ಬಾಪ್‌ದಾದಾರವರಿಗೆ ಒಂದು ಶುಭ ಸಂಕಲ್ಪ ಬಂದಿತು, ಹೇಳುವುದೇ? ಮಾಡಬೇಕಾಗುತ್ತದೆ. ಮಾಡುವಿರಾ, ತಯಾರಾಗಿದ್ದೀರಾ? ಯೋಚಿಸಬೇಡಿ.

ಬಾಪ್‌ದಾದಾರವರಿಗೆ ಸಂಕಲ್ಪ ಬಂದಿತು ಈ ಗಿಫ್ಟಂತು ತಂದೆಯ ಹತ್ತಿರ ತಲುಪಿ ಬಿಡುತ್ತದೆ ಆದರೆ ಜೊತೆಯಲ್ಲಿ ಬಾಪ್‌ದಾದಾರವರಿಗೆ ಮತ್ತೊಂದು ಗಿಫ್ಟ್ ಬೇಕಾಗಿದೆ. ನಿಮ್ಮ ಗಿಫ್ಟ್ ಬಹಳ ಚೆನ್ನಾಗಿದೆ ಆದರೆ ಬಾಪ್‌ದಾದಾರವರಿಗೆ ಇನ್ನೂ ಬೇಕಾಗಿದೆ. ಗಿಫ್ಟ್ ಕೊಡುವಿರಾ? ಹೇಗೆ ಈ ಸ್ಮೃತಿ ಚಿಹ್ನೆಯನ್ನು ಆಚರಿಸುತ್ತಾರೆ, ಶಿವಜಯಂತಿ ಅರ್ಥಾತ್ ಏನಾದರೂ ಅರ್ಪಣೆ ಮಾಡುತ್ತಾರೆ. ಬಲಿಹಾರಿಯಾಗುತ್ತಾರೆ. ಬಾಪ್‌ದಾದಾರವರು ಯೋಚಿಸಿದರು, ಬಲಿಹಾರಿಯಂತು ಎಲ್ಲಾ ಮಕ್ಕಳು ಆದರು. ಬಲಿಹಾರಿಯಾಗಿದ್ದೀರಾ ಅಥವಾ ಈಗಲೂ ಸ್ವಲ್ಪ-ಸ್ವಲ್ಪ ನಿಮ್ಮ ಹತ್ತಿರ ಸಂಭಾಲನೆ ಮಾಡಿಟ್ಟಿಕೊಂಡಿದ್ದೀರಾ? ಇಂದಿನ ದಿನ ವ್ರತವೂ ತೆಗೆದುಕೊಳ್ಳುತ್ತಾರೆ. ಅಂದಾಗ ಬಾಪ್‌ದಾದಾರವರಿಗೆ ಸಂಕಲ್ಪ ಬಂದಿತು- ಮಕ್ಕಳು ಕೆಲ-ಕೆಲವೊಮ್ಮೆ ಸ್ವಲ್ಪ ನಡೆಯುತ್ತಾ- ನಡೆಯುತ್ತಾ ಸುಸ್ತಾಗಿ

ಬಿಡುತ್ತಾರೆ, ಬಹಳ ಪರಿಶ್ರಮದ ಅನುಭವವನ್ನು ಮಾಡುತ್ತಾರೆ ಅಥವಾ ನಿರಂತರ ಯೋಗ ಜೊಡಿಸುವುದರಲ್ಲಿ ಕಷ್ಟದ ಅನುಭವ ಮಾಡುತ್ತಾರೆ, ಆಗಿ ಬಿಡುವುದು ಎಂದು ಯೋಚಿಸುತ್ತಾರೆ, ತಂದೆಗೆ ಬರವಸೆಯನ್ನು ಕೊಡುತ್ತಾರೆ - ನೀವು ಚಿಂತೆ ಮಾಡಬೇಡಿ, ಆಗಿ ಬಿಡುತ್ತದೆ ಎಂದು ಆದರೆ ಬಾಪ್‌ದಾದಾರವರಿಗೆ ಮಕ್ಕಳ ಸುಸ್ತು ಅಥವಾ ಒಂಟಿತನ ಅಥವಾ ಆಗಾಗ ಸ್ವಲ್ಪ ಬಲಹೀನರೂ ಆಗಿ ಬಿಡುತ್ತಾರೆ, ಗೊತ್ತಿಲ್ಲ ನಮ್ಮ ಭಾಗ್ಯವಿದೆಯೋ ಇಲ್ಲವೋ, ಕೆಲವೊಮ್ಮೆ ಈ ರೀತಿ ಯೋಚಿಸುವುದು ತಂದೆಗೆ ಇಷ್ಟವಾಗುತ್ತಿದಿಲ್ಲ. ಎಲ್ಲದಕ್ಕಿಂತ ಹೆಚ್ಚು ತಂದೆಗೆ ಮಕ್ಕಳ ಪರಿಶ್ರಮ ಇಷ್ಟವಾಗುವುದಿಲ್ಲ. ಮಾಲಿಕರು ಮತ್ತು ಪರಿಶ್ರಮ. ತಂದೆಗೂ ಬಾಲಕರಿಂದ ಮಾಲಿಕರಾಗಿದ್ದೀರಿ. ಭಗವಂತನಿಗೂ ಮಾಲಿಕರು ಮತ್ತು ಪರಿಶ್ರಮ ಪಡುತ್ತಿದ್ದೀರಿ! ಇಷ್ಟವಾಗುವುದೇ? ಕೇಳುವುದಕ್ಕೂ ಇಷ್ಟವಾಗುವುದಿಲ್ಲ. ತಂದೆಗೆ ಸಂಕಲ್ಪ ಬಂದಿತು ಮಕ್ಕಳು ಜನ್ಮದಿನದ ಗಿಫ್ಟನ್ನು ಅವಶ್ಯವಾಗಿ ಕೊಡುವರು ಹಾಗಾದರೆ ಏಕೆ ಇಂದು ಎಲ್ಲಾ ಮಕ್ಕಳು ಇದನ್ನು ಗಿಫ್ಟ್ ನ ರೂಪದಲ್ಲಿ ಕೊಡಬಾರದು. ಆ ಸ್ಥೂಲ ಗಿಫ್ಟ್‌ಂತೂ ವತನದಲ್ಲಿ ಪ್ರತ್ಯಕ್ಷವಾಯಿತು, ಆದರೆ ನಿರಾಕಾರ ಪ್ರಪಂಚದಲ್ಲಂತೂ ಈ ಗಿಫ್ಟ್ ಪ್ರತ್ಯಕ್ಷವಾಗುವುದಿಲ್ಲ. ಅಲ್ಲಂತು ಸಂಕಲ್ಪದ ಗಿಫ್ಟ್ ತಲುಪುವುದು. ತಂದೆಗೆ ಸಂಕಲ್ಪ ಬಂದಿತು ಇಂದು ಎಲ್ಲಾ ಮಕ್ಕಳಿಂದ ಗಿಫ್ಟ್ ತೆಗೆದುಕೊಳ್ಳಬೇಕು ಎಂದು. ಗಿಫ್ಟ್ ಕೊಡುವಿರಾ ಅಥವಾ ಕೊಟ್ಟು ನಂತರ ಅಲ್ಲಿಗೆ ಹೋಗಿ ವಾಪಸ್ ತೆಗೆಕೊಂಡುಬಿಡುವಿರಾ? ಅಥವಾ ಮಧುಬನದಲ್ಲಿ ಮಧುಬನದವರಂತೆ ಮತ್ತು ತಮ್ಮ ದೇಶದಲ್ಲಿ ತಮ್ಮ ದೇಶವರಂತೆ ಇರುವುದಿಲ್ಲ ತಾನೆ? ಮಕ್ಕಳು ಬಹಳ ಚತುರರಾಗಿಬಿಟ್ಟಿದ್ದಾರೆ. ತಂದೆಗೆ ಹೇಳುತ್ತಾರೆ ನಾವು ಬಯಸುವುದಿಲ್ಲ ವಾಪಸ್ಸು ಬರಲಿ ಎಂದು, ಆದರೆ ಬಂದುಬಿಡುತ್ತದೆ. ಬಂದು ಬಿಡುತ್ತದೆ ಎಂದರೆ ನೀವು ಏಕೆ ಸ್ವೀಕಾರ ಮಾಡುತ್ತೀರಿ? ಬಂದು ಬಿಡುತ್ತದೆ ಇದು ಸರಿಯಿದೆ, ಆದರೆ ಯಾವುದೇ ವಸ್ತು ನಿಮಗೆ ಇಷ್ಟವಿಲ್ಲ ಮತ್ತು ಯಾರೇ ಬಲವಂತಾಗಿ ಕೊಟ್ಟರೆ ನೀವು ತೆಗೆದುಕೊಳ್ಳುವಿರಾ ಅಥವಾ ವಾಪಸ್ಸು ಕೊಟ್ಟುಬಿಡುವಿರಾ? ವಾಪಸ್ಸು ಕೊಟ್ಟುಬಿಡುವಿರಲ್ಲವೇ? ಅಂದಾಗ ಸ್ವೀಕಾರ ಏಕೆ ಮಾಡುವಿರಿ? ಮಾಯೆಯಂತು ವಾಪಸ್ಸು ತೆಗೆದುಕೊಂಡು ಬರುವುದು ಆದರೆ ನೀವು ಸ್ವೀಕಾರ ಮಾಡಬೇಡಿ. ಇಂತಹ ಧೈರ್ಯವಿದೆಯೇ? ಯೋಚಿಸಿ ಹೇಳಿರಿ. ನಂತರ ಅಲ್ಲಿ ಹೋಗಿ ಹೇಳಬೇಡಿರಿ - ಬಾಬಾ ಏನು ಮಾಡಲಿ, ಬಯಸುವುದಿಲ್ಲ ಆದರೆ ಆಗಿಬಿಡುವುದು. ಇಂತಹ ಪತ್ರವನ್ನು ಬರೆಯುವುದಿಲ್ಲವೇ? ನಿಮ್ಮ ಧೈರ್ಯ ಮತ್ತು ತಂದೆಯ ಸಹಯೋಗ. ಧೈರ್ಯ ಕಡಿಮೆ ಮಾಡಬೇಡಿರಿ ನಂತರ ತಂದೆಯ ಸಹಯೋಗ ಸಿಗುತ್ತದೆ ಮತ್ತು ಸಿಗಲೇಬೇಕು, ಗ್ಯಾರಂಟಿ ಇದೆ. ಸಾಹಸ(ಧೈರ್ಯ) ನಿಮ್ಮದು ಸಹಯೋಗ ತಂದೆಯದು. ಸಂಕಲ್ಪ ಏನಾಗುವುದು? ಚೆಹರೆ(ಮುಖ) ನೊಡುತ್ತಿದ್ದಾರೆ... ಧೈರ್ಯವಿದೆಯೇ ಅಥವಾ ಇಲ್ಲವೇ! ಧೈರ್ಯ ಇರುವವರೇ. ಏಕೆಂದರೆ ಒಂದುವೇಳೆ ಧೈರ್ಯ ಇಲ್ಲದಿದ್ದರೆ ತಂದೆಯವರಾಗುವುದಿಲ್ಲ. ಆಗಿ ಬಿಟ್ಟಿದ್ದೀರಿ - ಇದರಿಂದ ಧೈರ್ಯವಿದೆಯೆಂದು ಸಿದ್ಧವಾಗುತ್ತದೆ. ಕೇವಲ ಚಿಕ್ಕ ವಿಷಯವನ್ನು ಮಾತನಾಡುತ್ತೀರಿ ಸಮಯಕ್ಕೆ ಧೈರ್ಯವನ್ನು ಸ್ವಲ್ಪ ಮರೆತು ಹೋಗುತ್ತೇವೆಂದು. ಏನಾದರೂ ಆದಾಗ ಧೈರ್ಯ, ಸಹಯೋಗ ನಂತರ ನೆನಪು ಬರುತ್ತದೆ. ಸಮಯದನುಸಾರ ಶಕ್ತಿಗಳನ್ನು ಉಪಯೋಗಿಸುವವರನ್ನೇ ಜ್ಞಾನಿ ಆತ್ಮ, ಯೋಗಿ ಆತ್ಮ ಎಂದು ಕರೆಯುತ್ತಾರೆ.

ಬಾಪ್‌ದಾದಾರವರಿಗೆ ಒಂದು ಮಾತಿನ ಬಹಳ ಖುಷಿಯಾಗುತ್ತದೆ, ಯಾವ ಮಾತಿಗೆ ಎಂದು ಗೋತ್ತಿದೆಯೇ? ಹೇಳಿ. (ಅನೇಕರು ತಿಳಿಸಿದರು) ಎಲ್ಲರೂ ಸರಿಯಾಗಿ ಹೇಳುತ್ತಿದ್ದೀರಿ ಆದರೆ ತಂದೆಯ ಸಂಕಲ್ಪ ಬೇರೆಯಾಗಿದೆ. ನೀವು ಬಹಳ ಗುಹ್ಯ ಮಾತನ್ನು ಹೇಳುತ್ತಿದ್ದೀರಿ, ಜ್ಞಾನಪೂರ್ಣರಾಗಿಬಿಟ್ಟಿದ್ದೀರಿ. ಬಾಪ್‌ದಾದಾರವರು ಖುಷಿಯಾಗುತ್ತಿದ್ದಾರೆ ಕೆಲವು ಮಕ್ಕಳು ಪತ್ರವನ್ನು ಮತ್ತು ಟಿಪ್ಪಣಿಗಳನ್ನು ಬರೆದಿದ್ದಾರೆ ನಾವು 108ರಲ್ಲಿ ಬರುವೆವು, ಬಹಳ ಟಿಪ್ಪಣಿಗಳು ಬಂದಿವೆ. ಇಷ್ಟು ಜನ 108ರಲ್ಲಿ ಬಂದು ಬಿಟ್ಟರೆ 108ರ ಮಾಲೆ ಐದು ತಂತಿಗಳಿಂದ ತಯಾರು ಮಾಡಬೇಕಾಗಿ ಬರುತ್ತದೆ  ಎಂದು ಬಾಬಾ ಯೋಚಿಸುತ್ತಿದ್ದಾರೆ. 5-6 ಅಥವಾ 7-8 ತಂತಿಗಳ ಮಾಲೆಯನ್ನು ತಯಾರು ಮಾಡಬೇಕಲ್ಲವೇ ಯಾರಾದರೆ ಸಂಕಲ್ಪ ಮಾಡಿದ್ದಾರೆಯೋ  ಲಕ್ಷ್ಯವನ್ನು ಇಟ್ಟುಕೊಂಡಿದ್ದಾರೆಯೋ ಬಹಳ ಒಳ್ಳೆಯದು. ಕೇವಲ ಈ ಸಂಕಲ್ಪವನ್ನು ಮಧ್ಯ-ಮಧ್ಯದಲ್ಲಿ ದೃಢವಾಗಿ ಮಾಡುತ್ತಿರಿ. ಸಡಿಲವಾಗಿ ಮಾಡಬೇಡಿ.  ಮಾಯೆ ಬಂದುಬಿಟ್ಟಿತು - ಈಗ ಗೊತ್ತಿಲ್ಲ ಬರುವುದೋ ಅಥವಾ ಇಲ್ಲವೋ. ಗೊತ್ತಿಲ್ಲ, ಗೊತ್ತಿಲ್ಲ,... ಎನ್ನಬೇಡಿ ಗೊತ್ತು ಮಾಡಿಕೊಂಡು ಬಿಡಿ ಬಂದೇ ಬರುತ್ತದೆ. ಧೃಡತೆಯ ಮುದ್ರೆನ್ನು ಹಾಕುತ್ತಿರಬೇಕು. ನಾನಂತೂ ಬರಲೇಬೇಕು, ಏನಾದರೂ ಆಗಲಿ, ನನ್ನ ನಿಶ್ಚಯ  ಸ್ಥಿರ ಮತ್ತು ಅಖಂಡವಾಗಿದೆ. ಇಂತಹ ಸ್ಥಿರ, ಅಖಂಡ ನಿಶ್ಚಯವಿದೆಯೇ? ಮಾಯೆಯನ್ನು ಅಲುಗಾಡಿಸಲು ಕಳುಹಿಸಲೇ? ಬೇಡವೇ? ಗಾಬರಿಯಾಗುತ್ತೀರಾ? ಮಾಯೆ ನಿಮ್ಮಿಂದ ಗಾಬರಿಯಾಗುತ್ತದೆ ಮತ್ತು ನೀವು ಮಾಯೆಯಿಂದ ಗಾಬರಿಯಾಗುತ್ತೀರಾ? ಮಾಯೆ ತನ್ನ ಬಾಗಿಲನ್ನು ನೋಡುತ್ತದೆ, ಇಲ್ಲಿ ತೆರೆದಿದೆ, ಇಲ್ಲಿ ತೆರೆದಿದೆ ಎಂದು ಹುಡುಕುತ್ತಿರುತ್ತದೆ. ನೀವು ಏಕೆ ಗಾಬರಿಯಾಗುತ್ತೀರಿ? ಮಾಯೆ ಎಂಬುದು ಇಲ್ಲ, ಏನೂ ಇಲ್ಲ ಎಂದು ಹೇಳಿದಾಗ ಏನು ಆಗುವುದಿಲ್ಲ. ಬರುವುದಕ್ಕೆ ಸಾಧ್ಯವಿಲ್ಲ ಎಂದರೆ ಬರುವುದಕ್ಕೆ ಸಾಧ್ಯವಿಲ್ಲ. ಏನು ಮಾಡುವುದು? ಎಂಬ ಮಾಯೆಯ ಬಾಗಿಲನ್ನು ತೆರೆದಿದ್ದೀರಿ ಎಂದರೆ ಮಾಯೆಯನ್ನು ಆಹ್ವಾನ ಮಾಡಿದಹಾಗೆ. ಬಹಳಷ್ಟು ಮಕ್ಕಳು 108ರಲ್ಲಿ ಬರುವುದಕ್ಕೆ ಪ್ರಾಮಿಸ್ ಮಾಡಿದ್ದಾರೆ. ಇದು ಒಳ್ಳೆಯದಾಗಿದೆ. ಮಾಡಿದ್ದೀರಲ್ಲವೇ? *ನಾವು 108ರಲ್ಲಿ ಬರುತ್ತೇವೆ ಎಂದು ಹೇಳಿದವರು ದೊಡ್ಡದಾಗಿ ಕೈಯನ್ನು ಎತ್ತಿರಿ. ಚೆನ್ನಾಗಿ ಡ್ರಿಲ್ ಮಾಡಿರಿ. ಬಹಳ ಒಳ್ಳೆಯದು ಶುಭಾಷಯಗಳು. 108 ರಲ್ಲಿ ಎಷ್ಟು ಜನ ಬರುತ್ತಾರೆ? ನಾವೆಲ್ಲಿ ಬರುವೆವು ಎಂದು ಯೋಚನೆ ಮಾಡಬೇಡಿರಿ. ಮೊದಲೇ ಎಣಿಸಲು ಪ್ರಾರಂಭಿಸುತ್ತಾರೆ - ದಾದಿ ಬರುತ್ತಾರೆ, ದೀದಿ ಬರುತ್ತಾರೆ, ನಂತರ ಅಣ್ಣ ಬರುತ್ತಾರೆ ಅಡ್ವಾನ್ಸ್ ಪಾರ್ಟಿ ಅವರು ಬರುತ್ತಾರೆ. ನನ್ನ ನಂಬರ್ ಎಲ್ಲಿ ಬರುವುದು ಗೊತ್ತಿಲ್ಲ. ಬಾಪ್‌ದಾದಾರವರು ಹೇಳುತ್ತಾರೆ - ಬಾಪ್‌ದಾದಾರವರು 8-10 ತಂತಿಯ(ಎಳೆಯ) ಮಾಲೆಯನ್ನೂ ಮಾಡುವರು, ಅದಕ್ಕಾಗಿ ನೀವು ಅದರ ಚಿಂತೆಯನ್ನು ಮಾಡಬೇಡಿ. ಬೇರೆಯವರನ್ನು ನೋಡಬೇಡಿ. ನಿಮಗೆ ನಂಬರ್ ಸಿಕ್ಕಿಬಿಡುವುದು, ಇದು ತಂದೆಯ ಗ್ಯಾರಂಟಿಯಾಗಿದೆ.* ನೀವು ದೂರ ಹೋಗಬೇಡಿ. ಮಾಲೆಯ ಮಧ್ಯದ ದಾರ(ಎಳೆ)ವನ್ನು ಖಾಲಿ ಮಾಡಬೇಡಿ. ಒಂದು ಮಣಿಯೂ ಸಹ ಮಧ್ಯದಿಂದ ಮುರಿದು ಹೋದರೆ ಅಥವಾ ಬಿದ್ದು ಹೋದರೆ ಮಾಲೆಯು ಚೆನ್ನಾಗಿ ಕಾಣಿಸುವುದಿಲ್ಲ. ಕೇವಲ ಇದನ್ನು ಮಾಡಬೇಡಿ, ತಂದೆಯು ಗ್ಯಾರಂಟಿ ಕೊಡುತ್ತಾರೆ ನೀವು ಅವಶ್ಯವಾಗಿ ಬರುವಿರಿ.

ಇಂದು ಆಚರಿಸಲು ಬಂದಿದ್ದೇವೆ ಮುರಳಿಯನ್ನು ನಡೆಸುವುದಕ್ಕೋಸ್ಕರ ಬಂದಿಲ್ಲ. *ಯಾರೆಲ್ಲಾ ಬಂದಿದ್ದೀರೋ ಅವರು ಮಾಲೆಯಲ್ಲಿ ಬಂದುಬಿಡಿ. 108ರ ಮಾಲೆಯಲ್ಲಿ ಎಲ್ಲರಿಗೂ ಸ್ವಾಗತವಿದೆ. ಇದಂತೂ ಭಕ್ತಿ ಮಾರ್ಗದವರು 108ರ

ಮಾಲೆಯನ್ನು ಮಾಡಿಬಿಟ್ಟಿದ್ದಾರೆ. ಬಾಪ್‌ದಾದಾರವರು ಎಷ್ಟಾದರೂ ಹೆಚ್ಚಿಸಬಹುದು.* ಕೇವಲ ಇದರಲ್ಲಿ ಗಿಫ್ಟನ್ನು ತಂದೆಯು ಅವಶ್ಯವಾಗಿ ತೆಗೆದುಕೊಳ್ಳುವರು, ಗಿಫ್ಟನ್ನು ಬಿಡುವುದಿಲ್ಲ, ಚಿಕ್ಕದಾದ ಗಿಫ್ಟ್ ಆಗಿದೆ ದೊಡ್ಡದೇನಿಲ್ಲ, ಏಕೆಂದರೆ ತಂದೆಯು ಎಲ್ಲಾ ಮಕ್ಕಳ ಆರು ತಿಂಗಳದ ಚಾರ್ಟನ್ನು ನೋಡಿದರು. ಏನು ನೋಡಿದರು? ಒಂದುವೇಳೆ ಯಾವುದೇ ಮಗು ಸ್ವಲ್ಪವೂ ಮೇಲೆ-ಕೆಳಗಾದರೆ, ಅಚಲ ಸ್ಥಿತಿಯಿಂದ ಏರುಪೇರಿನಲ್ಲಿ ಬಂದರೆ ಅದರ ಕಾರಣ ಕೇವಲ 3 ಮುಖ್ಯ ವಿಷಯಗಳಾಗಿವೆ. ಆ ಮೂರು ವಿಷಯಗಳು ಭಿನ್ನ-ಭಿನ್ನ ಸಮಸ್ಯೆ ಅಥವಾ ಪರಿಸ್ಥಿತಿಯಿಂದ ಬರುತ್ತವೆ. ಆ ಮೂರು ಮಾತುಗಳು ಯಾವುವಾಗಿವೆ?

ಅಶುಭ ಅಥವಾ ವ್ಯರ್ಥ ಯೋಚಿಸುವುದು. ಅಶುಭ ಅಥವಾ ವ್ಯರ್ಥ ಮಾತನಾಡುವುದು ಮತ್ತು ಅಶುಭ ಅಥವಾ ವ್ಯರ್ಥ ಮಾಡುವುದು. ಯೋಚಿಸುವುದು, ಮಾತನಾಡುವುದು ಮತ್ತು ಮಾಡುವುದು - ಇದರಲ್ಲಿ ಸಮಯ ಬಹಳ ವ್ಯರ್ಥವಾಗುತ್ತದೆ ಈಗ ವಿಕರ್ಮ ಕಡಿಮೆಯಾಗುತ್ತದೆ, ವ್ಯರ್ಥ ಜಾಸ್ತಿಯಾಗುತ್ತದೆ. ವ್ಯರ್ಥದ ಬಿರುಗಾಳಿ ಅಲುಗಾಡಿಸಿ ಬಿಡುತ್ತದೆ ಮತ್ತು ಮೊದಲು ಯೋಚನೆಯಲ್ಲಿ ಬರುತ್ತದೆ, ನಂತರ ಮಾತಿನಲ್ಲಿ ಬರುತ್ತದೆ, ನಂತರ ಕರ್ಮದಲ್ಲಿ ಬರುತ್ತದೆ ಮತ್ತು ಪರಿಣಾಮದಲ್ಲಿ ನೋಡಿದಾಗ ಯಾರದೂ ಮಾತು ಮತ್ತು ಕರ್ಮದಲ್ಲಿ ಬರುವುದಿಲ್ಲ ಆದರೆ ಯೋಚನೆಯಲ್ಲಿ ಬಹಳಷ್ಟು ಬರುತ್ತದೆ, ಸಂಕಲ್ಪದಲ್ಲಿ ಬಹಳಷ್ಟು ಬರುತ್ತದೆ. ಯಾವ ಸಮಯ ಮಾಡುವುದಾಗಿದೆಯೋ ಆ ಸಮಯ ಯೋಚನೆಯಲ್ಲಿ ಕಳೆದು ಹೋಗುತ್ತದೆ. ಬಾಪ್‌ದಾದಾರವರು ಇಂದು ಈ ಮೂರು ವಿಷಯಗಳು ಯೋಚಿಸುವುದು, ಮಾತನಾಡುವುದು ಮತ್ತು ಮಾಡುವುದು - ಇದರ ಗಿಫ್ಟ್ ಎಲ್ಲರಿಂದ ತೆಗೆದುಕೊಳ್ಳಲು ಬಯಸುತ್ತಾರೆ. ತಯಾರಾಗಿದ್ದೀರಾ? ಯಾರು ಕೊಟ್ಟು ಬಿಟ್ಟಿದ್ದೀರೋ ಅವರು ಕೈ ಎತ್ತಿರಿ. ಕೈಯೆತ್ತಿರುವ ವಿಡಿಯೋವನ್ನು ಚೆನ್ನಾಗಿ ಒಂದೊಂದು ಕಡೆಯಿಂದ ತೆಗೆಯಿರಿ. ದೊಡ್ಡದಾಗಿ ಕೈ ಎತ್ತಿರಿ. ಡ್ರಿಲ್ ಮಾಡುವುದಿಲ್ಲ ಅಂದಾಗ ದಪ್ಪಗಾಗಿ ಬಿಡುತ್ತೀರಿ. ಒಳ್ಳೆಯದು. ಎಲ್ಲರೂ ಇದನ್ನು ಕೊಟ್ಟು ಬಿಟ್ಟಿದ್ದೀರಿ. ವಾಪಸ್ಸು ತೆಗೆದುಕೊಳ್ಳಬಾರದು. ಬಾಯಿಂದ ಬಂದು ಬಿಟ್ಟಿತು, ಏನು ಮಾಡುವುದು? ಎಂದು ಹೇಳಬಾರದು. ಬಾಯಿಯ ಮೇಲೆ ದೃಢ ಸಂಕಲ್ಪದ ಬಟನ್ ಹಾಕಿಕೊಂಡು ಬಿಡಿ. ದೃಢ ಸಂಕಲ್ಪದ ಬಟನ್ ಇದೆಯಲ್ಲವೇ? ಏಕೆಂದರೆ ಬಾಪ್‌ದಾದಾರವರಿಗೆ ಮಕ್ಕಳೊಂದಿಗೆ ಪ್ರೀತಿಯಿದೆಯಲ್ಲವೇ. ಪ್ರೀತಿಯ ಗುರುತು ಪ್ರೀತಿ ಮಾಡುವವರ ಪರಿಶ್ರಮ ನೋಡಲು ಸಾಧ್ಯವಿಲ್ಲ. ಬಾಪ್‌ದಾದಾರವರು ಆ ಸಮಯದಲ್ಲಿ ಇದನ್ನೇ ಯೋಚಿಸುತ್ತಾರೆ- ಸಾಕಾರದಲ್ಲಿ ಹೋಗಿ ಇವರಿಗೆ ಏನಾದರೂ ಹೇಳಬೇಕು ಎಂದು ಆದರೆ ಈಗಂತೂ ಆಕಾರಿ, ನಿರಾಕಾರಿಯಾಗಿದ್ದಾರೆ. ಎಲ್ಲರೂ ಪರಿಶ್ರಮದಿಂದ ದೂರ ಪ್ರೀತಿಯ ಉಯ್ಯಾಲೆಯಲ್ಲಿ ತೂಗಬೇಕು. ಯಾವಾಗ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಿರುತ್ತೀರೋ ಆಗ ಪರಿಶ್ರಮ ಸಮಾಪ್ತಿಯಾಗಿ ಬಿಡುವುದು. ಪರಿಶ್ರಮವನ್ನು ಸಮಾಪ್ತಿ ಮಾಡಿಬಿಡಿ, ಸಮಾಪ್ತಿ ಮಾಡಿಬಿಡೋಣವೆಂದು ಯೋಚಿಸಬೇಡಿ. ಕೇವಲ ಪ್ರೀತಿಯ ಉಯ್ಯಾಲೆಯಲ್ಲಿ ಕುಳಿತುಕೊಂಡು ಬಿಡಿ, ಪರಿಶ್ರಮ ತಾನಾಗಿಯೇ ಬಿಟ್ಟು ಹೋಗುವುದು. ಬಿಡುವ ಪ್ರಯತ್ನವನ್ನು ಮಾಡಬೇಡಿ ಕುಳಿತುಕೊಳ್ಳುವ, ತೂಗುವ ಪ್ರಯತ್ನಪಡಿ.

ಶಿವ ಜಯಂತಿ ಅರ್ಥಾತ್ ಮಕ್ಕಳ ಪರಿಶ್ರಮದ ಸಮಾಪ್ತಿಯ ಜಯಂತಿ. ಸರಿ ಇದೆಯಲ್ಲವೇ? ತಂದೆಗೂ ಸಹ ಮಕ್ಕಳ ಮೇಲೆ ನಂಬಿಕೆ ಇದೆ. ಗೊತ್ತಿಲ್ಲ. ಯಾರು-ಯಾರು ದೂರ ಹೋಗಿ ಬಿಡುವರೋ ಎಂದು ತಂದೆಗೂ ಸಹ

ಗೊತ್ತಾಗುವುದಿಲ್ಲ. ಛತ್ರಛಾಯೆಯ ಒಳಗಡೆ ಕುಳಿತುಕೊಳ್ಳಿರಿ. ಬ್ರಾಹ್ಮಣ ಜೀವನದ ಅರ್ಥವೇ ಆಗಿದೆ ತೂಗುವುದು, ಮಾಯೆಯಲ್ಲಿ ಅಲ್ಲ. ಮಾಯೆಯು ಸಹ ತೂಗುತ್ತದೆ. ಅಮೃತವೇಳೆ ನೋಡಿ ಮಾಯೆ ಯಾವ ರೀತಿ ತೂಗುತ್ತದೆ. ಸೂಕ್ಷ್ಮವತನದಲ್ಲಿ ಬರುವ ಬದಲಾಗಿ, ನಿರಾಕಾರ ಪ್ರಪಂಚದಲ್ಲಿ ಬರುವುದರ ಬದಲಾಗಿ ನಿದ್ರಾಲೋಕದಲ್ಲಿ ಹೋಗಿಬಿಡುತ್ತೀರಿ. ಯೋಗ ಡಬಲ್ಲೈಟ್ ಮಾಡುವುದು ಆದರೆ ತಲೆ ಭಾರವಾಗಿಬಿಡುತ್ತದೆ. ಮಾಯೆಯು ಸಹ ಉಯ್ಯಾಲೆಯನ್ನು ತೂಗುತ್ತದೆ ಆದರೆ ಮಾಯೆಯ ಉಯ್ಯಾಲೆಯಲ್ಲಿ ತೂಗಬೇಡಿರಿ. ಅರ್ಧಕಲ್ಪ ಮಾಯೆಯ ಉಯ್ಯಾಲೆಯಲ್ಲಿ ಬಹಳ ಚೆನ್ನಾಗಿ ತೂಗಿರುವುದನ್ನು ನೋಡಿದಿರಲ್ಲವೇ ಏನು ಸಿಕ್ಕಿತು? ಏನಾದರೂ ಸಿಕ್ಕಿತೇ? ಸುಸ್ತಾಗಿ ಬಿಟ್ಟಿದ್ದೀರಲ್ಲವೇ. ಈಗ ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ತೂಗಿರಿ, ಖುಷಿಯ ಉಯ್ಯಾಲೆಯಲ್ಲಿ ತೂಗಿರಿ, ಶಕ್ತಿಗಳ ಅನುಭೂತಿಗಳ ಉಯ್ಯಾಲೆಯಲ್ಲಿ ತೂಗಿರಿ. ಇಷ್ಟೊಂದು ಉಯ್ಯಾಲೆಗಳು ಸಿಕ್ಕಿವೆ ಅಷ್ಟು ಇಲ್ಲಿರುವಂತಹ ರಾಜಕುಮಾರ ರಾಜಕುಮಾರಿಯರಿಗೂ ಸಹ ಸಿಕ್ಕಿರುವುದಿಲ್ಲ. ಈಗ ಜ್ಞಾನದ ಉಯ್ಯಾಲೆಯಲ್ಲಿ ತೂಗಿರಿ. ಎಷ್ಟೊಂದು ಉಯ್ಯಾಲೆಗಳಿವೆ. ಲೆಕ್ಕವಿಲ್ಲದಷ್ಟು. ಉಯ್ಯಾಲೆಯಿಂದ ಇಳಿಯಬೇಡಿರಿ. ಯಾರು ಮುದ್ದು ಮಕ್ಕಳಿರುತ್ತಾರೆ, ಅವರ ತಂದೆ-ತಾಯಿ ಇದನ್ನೇ ಬಯಸುತ್ತಾರೆ. ಮಕ್ಕಳ ಕಾಲು ಮಣ್ಣನ್ನು ಮುಟ್ಟಬಾರದು ಅಥವಾ ಮಡಿಲಲ್ಲಿರಬೇಕು ಅಥವಾ ಉಯ್ಯಾಲೆಯಲ್ಲಿರಲಿ ಅಥವಾ ರತ್ನಗಂಬಳಿಗಳಲ್ಲಿ ಇರಲಿ. ಮಣ್ಣಿನಲ್ಲಿ ಕಾಲಿಡಬಾರದು ಎಂದುಕೊಳ್ಳುತ್ತಾರೆ. ಈ ರೀತಿ ಆಗುತ್ತದೆಯೇ? ನೀವು ಎಷ್ಟು ಮುದ್ದಾದ ಮಕ್ಕಳಾಗಿದ್ದೀರಿ. ನಿಮ್ಮಷ್ಟು ಮುದ್ದು ಯಾರಾದರೂ ಇದ್ದಾರೆಯೇ? ಪರಮಾತ್ಮನ ಮುದ್ದು ಮಕ್ಕಳು ಒಂದುವೇಳೆ ದೇಹಬಾನದಲ್ಲಿ ಬಂದರೆ ದೇಹ ಏನಾಗಿದೆ? ಮಣ್ಣಾಗಿದೆಯಲ್ಲವೇ! ದೇಹವನ್ನು ಏನೆಂದು ಹೇಳುತ್ತೀರಿ? ಮಣ್ಣು. ಮಣ್ಣಿನಲ್ಲಿ ಸೇರಿಬಿಡುವುದು. ಇದು ಮಣ್ಣಾಗಿದೆಯಲ್ಲವೇ. ಮಣ್ಣಿನಲ್ಲಿ ಕಾಲನ್ನು ಏಕೆ ಇಡುತ್ತೀರಿ? ಮಣ್ಣು ಇಷ್ಟವಾಗುತ್ತದೆಯೇ? ಕೆಲವು ಮಕ್ಕಳಿಗೆ ಮಣ್ಣು ಇಷ್ಟವಾಗುತ್ತದೆ. ಕೆಲವರು ಮಣ್ಣನ್ನು ಸಹ ತಿನ್ನುತ್ತಾರೆ. ಆದರೆ ನೀವು ತಿನ್ನಬೇಡಿ, ಕಾಲನ್ನೂ ಇಡಬೇಡಿ. ಸಂಕಲ್ಪ ಬರುವುದು ಅರ್ಥಾತ್ ಕಾಲಿಡುವುದು. ಸಂಕಲ್ಪದಲ್ಲಿಯೂ ದೇಹಭಾನ ಬರಬಾರದು. ಯೋಚಿಸಿರಿ, ನೆನಪಿಡಿ ನಾವು ಎಷ್ಟು ಮುದ್ದಾದ ಮಕ್ಕಳಾಗಿದ್ದೇವೆ, ಯಾರಿಗೆ ಮುದ್ದಾದ ಮಕ್ಕಳಾಗಿದ್ದೇವೆ! ಸತ್ಯಯುಗದಲ್ಲಿಯೂ ಪರಮಾತ್ಮನ ಮುದ್ದು ಮಕ್ಕಳು ಇರುವುದಿಲ್ಲ. ದಿವ್ಯ ಆತ್ಮರ ಮುದ್ದು ಮಕ್ಕಳಾಗಿರುತ್ತೇವೆ. ಆದರೆ ಈ ಸಮಯ ಪರಮಾತ್ಮ ತಂದೆಗೆ ಮುದ್ದು ಮಕ್ಕಳಾಗಿದ್ದೇವೆ. ಮಕ್ಕಳು ಧೈರ್ಯದ ಕೈಯಿಂದ ಗಿಫ್ಟ್ ನ್ನು ಕೊಟ್ಟರು ಅದಕ್ಕಾಗಿ ಬಾಪ್‌ದಾದಾರವರು ಧನ್ಯವಾದಗಳನ್ನು ಹೇಳುತ್ತಾರೆ, ಧನ್ಯವಾದಗಳು.

ಒಳ್ಳೆಯದು, ಇಂದು ಡಬಲ್ ವಿದೇಶಿಯರಿಗೆ ವಿಶೇಷವಾದ ದಿನ. ಡಬಲ್ ವಿದೇಶಿಯರು ಯಾರು ಕುಳಿತಿರುವಿರೋ ಅವರು ಕೈಯೆತ್ತಿರಿ. ಹಾಲ್ನಲ್ಲಿ ಮುಕ್ಕಾಲು ಭಾಗ ಡಬಲ್ ವಿದೇಶಿಯರೇ ಇದ್ದಾರೆ. ಬಾಬಾ ಕೂಡ ಸ್ವಾಗತಿಸುತ್ತಿದ್ದಾರೆ. ಬಂದಿರುವಿರಿ ಸಂತೋಷ, ಸದಾ ಬನ್ನಿರಿ ಎಂದು. ನೋಡಿರಿ ಎಷ್ಟು ಮಕ್ಕಳು ಹೆಚ್ಚಾಗುತ್ತಾ ಇದ್ದಾರೆಯೋ ಅಷ್ಟು ಭೂಮಿ ಇನ್ನೂ ಚಿಕ್ಕದಾಗಿ ಬಿಡುತ್ತದೆ. ಈ ಹಾಲ್ ತಯಾರು ಮಾಡುತ್ತಿರುವಾಗ ಈ ಹಾಲ್ ತುಂಬುತ್ತದೆಯೇ ಎಂದು ಯೋಚಿಸುತ್ತಿದ್ದಿರಲ್ಲವೇ. ಈಗ ಹಾಲೇನು? ಕೆಳಗೆ ಕೂಡ ಎಷ್ಟು ಗೀತಾ ಪಾಠಶಾಲೆಗಳು ತಯಾರಾಗಿವೆ. ಬಹಳಷ್ಟು ಮಕ್ಕಳು ಕೆಳಗೆ ಕುಳಿತುಕೊಳ್ಳುತ್ತಿದ್ದಾರೆ. (ಮಧುಬನದಲ್ಲಿ ಕುಳಿತು ಮುರುಳಿಯನ್ನು

ಕೇಳುತ್ತಿದ್ದಾರೆ). ಈಗ ಕೆಳಗಿನ ಹಾಲ್(ಶಾಂತಿವನ) ತಯಾರು ಮಾಡಿದಾಗ ಹೆಚ್ಚು ಸಂಖ್ಯೆಯ ಅವಕಾಶವನ್ನು ಕೊಡಬೇಕು ಎಂದು ಕೇಳುತ್ತಿದ್ದಾರೆ. ಇಷ್ಟು ದೊಡ್ಡ ಹಾಲ್ ಏಕೆ ತಯಾರು ಮಾಡಿದ್ದೀರಿ? ಸಂಖ್ಯೆಯನ್ನು ಹೆಚ್ಚಿಸಲೋ ಅಥವಾ ಸ್ವಾತಂತ್ರ ಕೊಡಲೋ? ಇದರಿಂದ ಏನು ಪ್ರಮಾಣವಾಗುತ್ತದೆ? ನೀವೆಲ್ಲರೂ ವಿಶ್ವಕ್ಕೆ ಮಾಲಿಕರಾಗಬೇಕು. ವಿಶ್ವಕ್ಕೆ ಮಾಲೀಕರಾಗುವವರಿಗೆ ಇಷ್ಟು ದೊಡ್ಡವೂ ಕೂಡ ಚಿಕ್ಕವಾಗಿ ಬಿಡುತ್ತವೆ. ಈ ಹಾಲೇನು ಇಡೀ ವಿಶ್ವವೇ ನಿಮಗೆ ಲಭಿಸುತ್ತದೆ.

(ಬಾಪ್‌ದಾದಾ ಡ್ರಿಲ್ ಮಾಡಿಸಿದರು) ಮನಸ್ಸಿಗೆ ಮಾಲೀಕರಲ್ಲವೇ ಆದ್ದರಿಂದ ಸ್ಟಾಪ್ ಅಂದಾಕ್ಷಣ ಸ್ಟಾಪ್ ಆಗಿ ಬಿಡಬೇಕು ನೀವು ಸ್ಟಾಪ್ ಎಂದಾಗ ಮನಸ್ಸು ನಡೆಯುತ್ತಾ ಇದ್ದರೆ ಇದರಿಂದ ಮಾಲೀಕ ಸ್ಥಿತಿಯ ಶಕ್ತಿ ಕಡಿಮೆ ಇದ್ದುದನ್ನು ಪ್ರಮಾಣೀಕರಿಸುತ್ತದೆ ಆದ್ದರಿಂದ ಈ ರೀತಿ ಇರಬಾರದು. ಮಾಲಿಕ ಶಕ್ತಿಶಾಲಿಯಾಗಿದ್ದರೆ ಮಾಲೀಕನ ಡೈರೆಕ್ಷನ್ ಇಲ್ಲದೇ ಮನಸ್ಸು ಒಂದು ಸಂಕಲ್ಪ ಕೂಡ ಮಾಡುವುದಿಲ್ಲ. ಸ್ಟಾಪ್ ಅಂದಾಕ್ಷಣ ಸ್ಟಾಪ್ ಆಗಬೇಕು. ನಡೆಯಲು ಹೇಳಿದಾಕ್ಷಣ ನಡೆಯಬೇಕು. ಎಲ್ಲಿ ನಡೆಸಬೇಕೋ ಅಲ್ಲಿ ನಡೆಸಲು ಆಗಬೇಕು. ಮನಸ್ಸಿಗೆ ಬಹಳ ಸಮಯದಿಂದ ವ್ಯರ್ಥದ ಕಡೆ ನಡೆಯುವ ಅಭ್ಯಾಸವಿದ್ದರೆ ನೀವು ಶುದ್ಧ ಸಂಕಲ್ಪಗಳ ಕಡೆ ನಡೆಸಿದರೂ ಮನಸ್ಸು ವ್ಯರ್ಥದ ಕಡೆ ಹೋಗಿಬಿಡುತ್ತದೆ. ಮಾಲಿಕ ಮಾಲೀಕನ ಸ್ಥಿತಿಯಲ್ಲಿ ಇದ್ದು ನಡೆಸಲು ಬರುತ್ತಿಲ್ಲ, ಹೀಗಾಗಬಾರದು ಆದ್ದರಿಂದ ಈ ಅಭ್ಯಾಸವನ್ನು ಮಾಡಿರಿ ಸ್ಟಾಪ್ ಎಂದರೂ ಸ್ವಲ್ಪ ನಡೆದ ನಂತರ ಸ್ಟಾಪ್ ಆಗುತ್ತಿದೆಯೇ? ಇದನ್ನು ಪರಿಶೀಲಿಸಿಕೊಳ್ಳಿರಿ. ಒಂದು ವೇಳೆ ನಿಮ್ಮ ಬೈಕ್ ಗಳಿಗೆ ಬ್ರೇಕ್ ಹಾಕಬೇಕಾದಾಗ ಸ್ವಲ್ಪ ಸಮಯದ ನಂತರ ಬ್ರೇಕ್ ಬಿದ್ದರೆ ಆ ಬೈಕ್ ಕೆಲಸ ಮಾಡುತ್ತಿದೆಯೇ? ಡ್ರೈವ್ ಮಾಡುತ್ತಿರುವವರು ಯೋಗ್ಯವಾಗಿರುವವರೇ ಅಥವಾ ಆಕ್ಸಿಡೆಂಟ್ ಮಾಡುವವರೇ? ಬ್ರೇಕ್ ಹಾಕಿದಾಕ್ಷಣ ಬ್ರೇಕ್ ಬೀಳಬೇಕು. ಈ ಅಭ್ಯಾಸವೇ ಕರ್ಮಾತೀತ ಸ್ಥಿತಿಗೆ ಸಮೀಪವಾಗಿ ಕರೆದೊಯ್ಯುತ್ತದೆ. ಸಂಕಲ್ಪ ಮಾಡಿದಾಕ್ಷಣ ಕರ್ಮದಲ್ಲಿ ಕೂಡ ಫುಲ್ ಸ್ಟಾಪ್ ಆಗಬೇಕು. ಕರ್ಮಾತೀತ ಅರ್ಥಾತ್ ಪ್ರತಿಯೊಂದು ಸಬ್ಜೆಕ್ಟ್ ನಲ್ಲಿ ಪೂರ್ತಿಯಾಗಿ ಪಾಸ್ ಆಗುವುದು ಎಂದರ್ಥ. 75% ಪ್ರತಿಶತ 90% ಪ್ರತಿಶತ ಕೂಡ ಅಲ್ಲ, ಪೂರ್ತಿಯಾಗಿ ಪಾಸಾಗಬೇಕು. ಈ ಸ್ಥಿತಿ ತಯಾರಾದಾಗ ನಿಮ್ಮ ಜೀವನದಲ್ಲಿ ಸರ್ವಶಕ್ತಿಗಳು ಪ್ರತ್ಯಕ್ಷವಾಗಿ ಅನುಭವ ಮಾಡಿದ ಹಾಗೆ. ಇಷ್ಟಕ್ಕೆ ಮುಂಚೆ ಕೂಡ ತಿಳಿಸಿದ್ದೆನು. ಸರ್ವಶಕ್ತಿಗಳನ್ನು ತಂದೆ ಕೊಟ್ಟಿದಾರೆ ನೀವು ತೆಗೆದುಕೊಂಡಿದ್ದೀರಿ ಆದರೆ ಸಮಯಾನುಸಾರ ಉಪಯೋಗಿಸುತ್ತಿದ್ದೀರಾ ಅಥವಾ ಇಲ್ಲವೋ, ಕೇವಲ ಸ್ಟಾಕ್ ಇದೆ ಅಷ್ಟೇನಾ? ಸ್ಟಾಕ್ ಇದ್ದರೂ ಕೂಡ ಸಮಯಕ್ಕೆ ಉಪಯೋಗಿಸದಿದ್ದರೆ ಅದು ಇದ್ದರೂ ಇಲ್ಲದ ಹಾಗೆ. ಪರಿಸ್ಥಿತಿ ಎಷ್ಟು ನಾಜೂಕಾಗಿ ಇದ್ದರೂ ಕೂಡ ಮನಸ್ಸು, ಬುದ್ಧಿಗೆ ಆಜ್ಞೆ ಕೊಟ್ಟಾಕ್ಷಣ ಅತೀತವಾಗಿ ಆ ಪರಿಸ್ಥಿತಿಯನ್ನು ಆಟದಂತೆ ನೋಡಿದರೆ ಆ ಪರಿಸ್ಥಿತಿ ನಿಮ್ಮ ಅಚಲ ಸ್ಥಿತಿಯ ಆಸನದ ಕೆಳಗೆ ಹತ್ತಿಕ್ಕಿ ಹೋಗುತ್ತವೆ (ಅಪ್ಪಚ್ಚಿಯಾಗುವುದು). ಈ ಅನುಭವವನ್ನು ಮಾಡಿಕೊಳ್ಳಿರಿ. ಆ ಪರಿಸ್ಥಿತಿ ನಿಮ್ಮನ್ನು ಎದುರಿಸಲಾಗುವುದಿಲ್ಲ ಆಸನವನ್ನು ಬಿಡಬೇಡಿರಿ. ಆಸನದ ಮೇಲೆ ಕುಳಿತುಕೊಳ್ಳುವ ಅಭ್ಯಾಸವೇ ಸಿಂಹಾಸನವನ್ನು ಪ್ರಾಪ್ತಿ ಮಾಡಿಸುತ್ತದೆ. ಒಂದು ವೇಳೆ ಆಸನದ ಮೇಲೆ ಪೂರ್ತಿಯಾಗಿ ಕುಳಿತುಕೊಳ್ಳಲು ಬರದಿದ್ದರೆ ಆಗಾಗ ಕುಳಿತುಕೊಂಡರೆ ಆಗ ಸಿಂಹಾಸನದ ಮೇಲೆ ಕೂಡ ಆಗಾಗ ಕುಳಿತುಕೊಳ್ಳುತ್ತೀರಿ. ಈ ಆಸನವೇ ಸಿಂಹಾಸನವನ್ನು ಪ್ರಾಪ್ತಿ ಮಾಡಿಸುತ್ತದೆ. ಆಸನ ನಂತರ ಸಿಂಹಾಸನ.

ಏರುಪೇರಾಗುವವರು ಸಿಂಹಾಸನದ ಮೇಲೆ ಏಕಾಗ್ರತೆಯಿಂದ ಕುಳಿತುಕೊಳ್ಳಲಾಗುವುದಿಲ್ಲ. ಆದ್ದರಿಂದ ಎಲ್ಲಿ ವ್ಯರ್ಥ, ಅಶುಭ ಸಮಾಪ್ತಿ ಆಗಿಬಿಡುತ್ತವೆಯೋ ಅಲ್ಲಿ ಅಚಲವಾಗಿ(ಸ್ಥಿರವಾಗಿ) ಇರಬಲ್ಲಿರಿ ಮತ್ತು ಅಚಲ ಸ್ಥಿತಿಯ ಆಸನದ ಮೇಲೆ ಸಹಜವಾಗಿ ಮತ್ತು ಸದಾ ಸ್ಥಿತರಾದ ಬಲ್ಲಿರಿ. ನಿಮ್ಮೆಲ್ಲರ ಸ್ಮೃತಿ ಚಿಹ್ನೆಯೇ ಅಚಲ್ ಘರ್. ಅದನ್ನು ನೋಡಿರುವಿರಲ್ಲವೇ? ಇದು ಯಾರ ಸ್ಮೃತಿ ಚಿಹ್ನೆಯಾಗಿದೆ ನಿಮ್ಮೆಲ್ಲರ ಸ್ಥಿತಿಗೆ ಸ್ಮೃತಿ ಚಿಹ್ನೆಯೇ ಈ ಅಚಲ್ ಘರ್, ಅನುಭವ ಮಾಡಿಕೊಳ್ಳಿರಿ, ಉಪಯೋಗಿಸುತ್ತಾ ಹೋಗಿರಿ. ಎಲ್ಲಾ ಶಕ್ತಿಗಳು ಇವೆ ಎಂದು ತಿಳಿಯುವುದಲ್ಲ. ಸಮಯದನುಸಾರ ಉಪಯೋಗಿಸಬೇಕು. ಉಪಯೋಗಿಸದಿದ್ದರೆ ಸಮಯಕ್ಕೆ ಮೋಸ ಹೋಗುತ್ತೀರಿ ಆದ್ದರಿಂದ ಸಣ್ಣ ಮತ್ತು ದೊಡ್ಡ ಪರಿಸ್ಥಿತಿಗಳಲ್ಲಿ ಉಪಯೋಗಿಸಿ ನೋಡಿರಿ. ಪರಿಸ್ಥಿತಿಗಳಂತೂ ಬರಲೇಬೇಕು ಬರುತ್ತವೆ ಕೂಡ.. ಬಾಪ್‌ದಾದಾ ಮೊದಲೇ ತಿಳಿಸಿದ್ದಾರೆ ವರ್ತಮಾನ ಸಮಯವನ್ನು ಅನುಭವ ಮಾಡಿಕೊಳ್ಳುತ್ತಾ ನಡೆಯಿರಿ. ಪ್ರತಿಯೊಂದು ಶಕ್ತಿಯನ್ನು ಅನುಭವ ಮಾಡಿರಿ. ಪ್ರತಿಯೊಂದು ಗುಣವನ್ನು ಅನುಭವ ಮಾಡಿಕೊಳ್ಳಿರಿ.  ಯಾವ ಆತ್ಮನಾದರೂ, ನಿಮ್ಮ ಹತ್ತಿರ ಬಂದಾಕ್ಷಣ ನಿಮ್ಮ ಅನುಭವದ ಸಹಾಯದಿಂದ ಆ ಆತ್ಮನಿಗೆ ಪ್ರಾಪ್ತಿ ಆಗಬೇಕು. ಈ ವಿಧವಾದ ಅನುಭವೀ  ಮೂರ್ತಿಯಾಗಿರಿ. ದಿನದಿಂದ ದಿನಕ್ಕೆ ಆತ್ಮರು ಶಕ್ತಿ ಹೀನವಾಗಿ ಬಿಡುತ್ತಿದ್ದಾರೆ. ಆಗುತ್ತಲೂ ಇರುತ್ತಾರೆ. ಅಂತಹ ಆತ್ಮರಿಗೆ ನೀವು ನಿಮ್ಮ ಶಕ್ತಿಗಳ ಅನುಭೂತಿಯನ್ನು, ಸಹಾಯವನ್ನು ಕೊಟ್ಟು ಅನುಭವ ಮಾಡಿಸಬೇಕು. ಒಳ್ಳೆಯದು. ಮಾಲೀಕರಲ್ಲವೇ? ಮಾಲೀಕರಿಗೆ ನಮಸ್ಕಾರ ಎಂದು ಬಾಬಾ ಹೇಳುತ್ತಿದ್ದಾರೆ, ಒಳ್ಳೆಯದು.

**ನಾಲ್ಕಾರು ಕಡೆಯ ಅತೀ-ಅತೀ ಭಾಗ್ಯವಂತ ಮಕ್ಕಳು ಯಾರು ಸ್ವಯಂ ಶಿವ ತಂದೆಯ ಜೊತೆ ಶಿವಜಯಂತಿಯನ್ನು ಆಚರಿಸುತ್ತಿದ್ದಾರೆ, ಇಂತಹ ಪದಮಗುಣವೇನು ಆದರೆ ಎಷ್ಟೇ ಹೆಚ್ಚು ಹೇಳಿದರು ಅದು ಸಹ ಕಡಿಮೆಯಾಗಿದೆ ಇಂತಹ ಮಹಾನ್ ಭಾಗ್ಯವಂತ ಆತ್ಮರು, ಸದಾ ತಂದೆಯ ಆಜ್ಞೆಯ ಮೇಲೆ ನಡೆಯುವರು ಪ್ರತಿ ಹೆಜ್ಜೆಯನ್ನು ಇಡುವಂತಹ ತಂದೆಯ ಸ್ನೇಹಿ ಮತ್ತು ಸಮೀಪ ಆತ್ಮರಿಗೆ, ಸದಾ ಮಾಲೀಕತನದ ಆಸನ ನಿವಾಸಿಯಿಂದ ಭವಿಷ್ಯ ಸಿಂಹಾಸನ ನಿವಾಸಿ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಜೊತೆ-ಜೊತೆ ಮೋಜಿನಿಂದ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಾ ಜೊತೆಯಲ್ಲಿ ನಡೆಯುವಂತಹ ಬಾಪ್‌ದಾದಾರವರ ಜೊತೆಗಾರ ಮಕ್ಕಳಿಗೆ ಬಾಪ್‌ದಾದಾರವರ ಜನ್ಮ ದಿನದ ಶುಭಷಯಗಳು ಮತ್ತು ನೆನಪು-ಪ್ರೀತಿ ಸ್ವೀಕಾರ ಮಾಡಿ. ತಂದೆಯ ಎಲ್ಲಾ ಮಾಲೀಕರಿಗೆ ನಮಸ್ತೆ.**

ರಿವೈಸ್ ಕೋರ್ಸ್ 06-03-1997.

***ಶಿವಜಂತಿಯ ಉಡುಗೊರೆ ಪರಿಶ್ರಮವನ್ನು ಬಿಟ್ಟು ಪ್ರೀತಿಯ ಉಯ್ಯಾಲೆಯಲ್ಲಿ ತೂಗಿರಿ.***

ಅಶುಭ ಅಥವಾ ವ್ಯರ್ಥವನ್ನು ಯೋಚಿಸುವುದು, ಮಾತನಾಡುವುದು ಮತ್ತು ಮಾಡುವುದು ಇದರಲ್ಲಿ ಬಹಳ ಸಮಯ ವ್ಯರ್ಥವಾಗುತ್ತಿದೆ.  ಈಗ ವಿಕರ್ಮ ಕಡಿಮೆಯಾದರೂ ಕೂಡ ವ್ಯರ್ಥ ಜಾಸ್ತಿ ಆಗುತ್ತಿದೆ. ವ್ಯರ್ಥದ ಬಿರುಗಾಳಿ ಅಲುಗಾಡಿಸಿ ಬಿಡುತ್ತಿದೆ. ಇಂದು ಬಾಪ್‌ದಾದಾರವರು ಈ ಮೂರು ವಿಷಯಗಳ ಗಿಫ್ಟನ್ನು ತೆಗೆದುಕೊಳ್ಳಲು ಬಯಸುತ್ತಿದ್ದಾರೆ. ಎಲ್ಲರೂ

ಪರಿಶ್ರಮದಿಂದ ದೂರ ಪ್ರೀತಿಯ ಉಯ್ಯಾಲೆಯಲ್ಲಿ ತೂಗಬೇಕು. ಯಾವಾಗ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಿರೋ ಆಗ ಪರಿಶ್ರಮ ಸಮಾಪ್ತಿಯಾಗಿ ಬಿಡುವುದು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಶಿವ ತಂದೆಯೊಂದಿಗೆ ಶಿವ ಜಯಂತಿಯನ್ನು ಆಚರಿಸಿಕೊಳ್ಳುವ ಭಾಗ್ಯಶಾಲಿಯಾಗಿದ್ದೇನೆ.

2. ನಾನು ಫರಿಶ್ತೆಯಿಂದ ದೇವತೆಯಾಗುವ ತಂದೆಯ ಮಗುವಾಗಿದ್ದೇನೆ.

3. ನಾನು ತಂದೆಯ ಪೂರ್ಣ ಆಸ್ತಿಗೆ(ವಾರಸತ್ವ) ಅಧಿಕಾರಿಯಾಗುವ ಜ್ಞಾನ ಸ್ವರೂಪ.

4. ನಾನು ನಿರಂತರ ಯೋಗವನ್ನು ಜೋಡಿಸುವ ಸಹಜ ಯೋಗಿ.

5. ನಾನು ತಂದೆಗೆ ಅರ್ಪಣೆ ಮಾಡಿರುವ ಬಲಹೀನತೆಗಳನ್ನು ಮಾಯೆ ತಂದುಕೊಟ್ಟರೂ ಸ್ವೀಕರಿಸದೇ ಇರುವ ಧೈರ್ಯ ಸ್ವರೂಪ.

6. ನಾನು ಧೈರ್ಯವಿಟ್ಟುಕೊಳ್ಳುವ ಕಾರಣ ಸಮಯಾನುಸಾರ ತಂದೆಯ ಸಹಾಯ ಲಭಿಸುತ್ತಿದೆ. ಮತ್ತು ಲಭಿಸಲೇಬೇಕು ಇದು ಗ್ಯಾರಂಟಿ ಆಗಿದೆ ಎಂಬ ಸ್ಮೃತಿ ಇದೆ.

7. ನಾನು ಸಮಯಕ್ಕೆ ಎಲ್ಲಾ ಶಕ್ತಿಗಳನ್ನು ಉಪಯೋಗಿಸುವ ಜ್ಞಾನಿ ಮತ್ತು ಯೋಗಿಯಾಗಿದ್ದೇನೆ.

8. ನಾನು 108ರ ಮಾಲೆಯಲ್ಲಿ ಬರುತ್ತೇನೆ ಎಂಬ ದೃಢಸಂಕಲ್ಪ, ಲಕ್ಷ್ಯವನ್ನು ಇಟ್ಟುಕೊಂಡಿದ್ದೇನೆ.

9. ಮಾಯೆ ಎಷ್ಟು ಏರುಪೇರು ಮಾಡಿದರೂ, ಏನಾದರೂ ಆಗಲಿ ನಾನು 108ರ ಮಾಲೆಯಲ್ಲಿ ಬರುತ್ತೇನೆ ಎಂಬ ನಿಶ್ಚಯವನ್ನು ದೃಢವಾಗಿ, ಸ್ಥಿರವಾಗಿ, ಅಖಂಡವಾಗಿಟ್ಟು ಕೊಂಡಿದ್ದೇನೆ.

10. ನಾನು ಅಶುಭ ಅಥವಾ ವ್ಯರ್ಥವನ್ನು ಯೋಚಿಸುವುದು ಅಶುಭ ಅಥವಾ ವ್ಯರ್ಥವನ್ನು ಮಾತನಾಡುವುದು ಮತ್ತು ಅಶುಭ ಅಥವಾ ವ್ಯರ್ಥವನ್ನು ಮಾಡುವುದು ಎಂಬ ಈ ಮೂರು ವಿಷಯಗಳ ಗಿಫ್ಟನ್ನು ತಂದೆಗೆ ಕೊಟ್ಟಿದ್ದೇನೆ.

11. ನಾನು ಪರಿಶ್ರಮವನ್ನು ಸಮಾಪ್ತಿ ಮಾಡಿ ತಂದೆಯ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಿದ್ದೇನೆ.

12. ನಾನು ತಂದೆಯ ಛತ್ರಛಾಯೆಯಲ್ಲಿ ಕುಳಿತಿದ್ದೇನೆ.

13. ನಾನು ಅತೀಂದ್ರಿಯ ಸುಖ, ಖುಷಿ, ಶಕ್ತಿಗಳ ಅನುಭೂತಿಯ, ಪ್ರೀತಿ, ಆನಂದ, ಜ್ಞಾನದ ಉಯ್ಯಾಲೆಯಲ್ಲಿ ತೂಗುತ್ತಿದ್ದೇನೆ.

14. ನಾನು ಸಂಕಲ್ಪದಿಂದ ದೇಹಾಭಿಮಾನ ಎಂಬ ಮಣ್ಣಿನಲ್ಲಿ ಪಾದವನ್ನು ಇಡದೇ ಇರುವ ತಂದೆಯ ಮುದ್ದಾದ ಮಗುವಾಗಿದ್ದೇನೆ.

15. ನಾನು ಸತ್ಯಯುಗದಲ್ಲಿ ದಿವ್ಯ ಆತ್ಮರಿಗೆ ಪ್ರಿಯವಾಗಿ ಇರುತ್ತೇನೆ ಆದರೆ ಈ ಸಮಯದಲ್ಲಿ ಪರಮಾತ್ಮನಿಗೆ ಪ್ರಿಯವಾದವನಾಗಿ ಇದ್ದೇನೆ.

16. ನಾನು ಮನಸ್ಸಿಗೆ ಮಾಲಿಕನಾಗಿ ಸ್ಟಾಪ್ ಎಂದಾಕ್ಷಣ ಸ್ಟಾಪ್ ಆಗುತ್ತಿದೆಯೇ ಎಂದು ಪರಿಶೀಲಿಸಿಕೊಳ್ಳುತ್ತಿದ್ದೇನೆ ಮತ್ತು ಈ ಅಭ್ಯಾಸವೇ ನನ್ನನ್ನು ಕರ್ಮಾತೀತ ಸ್ಥಿತಿಗೆ ಸಮೀಪವಾಗಿ ತಂದಿದೆ.

17. ನಾನು ಪ್ರತಿಯೊಂದು ಸಬ್ಜೆಕ್ಟ್ ನಲ್ಲಿ ಪೂರ್ಣವಾಗಿ ಪಾಸ್ ಆಗಿ ಸರ್ವ ಶಕ್ತಿಗಳನ್ನು ಪ್ರತ್ಯಕ್ಷವಾಗಿ ಅನುಭವ ಮಾಡುವ ಕರ್ಮತೀತ ಸ್ವರೂಪ.

18. ಪರಿಸ್ಥಿತಿ ಎಷ್ಟು ನಾಜೂಕಾಗಿದ್ದರೂ ಮನಸ್ಸು, ಬುದ್ಧಿಗೆ ಆಜ್ಞೆಯನ್ನು ಕೊಟ್ಟಾಕ್ಷಣ ಅತೀತ ಮತ್ತು ಆ ಪರಿಸ್ಥಿತಿಯನ್ನು ನಾನು ಆಟದಂತೆ ನೋಡುತ್ತಾ ಇದ್ದ ಕಾರಣ ಆ ಪರಿಸ್ಥಿತಿ ನನ್ನ ಅಚಲ ಸ್ಥಿತಿಯ ಆಸನದ ಕೆಳಗಡೆ ಅಪ್ಪಚ್ಚಿಯಾಗಿದೆ.

19. ಅಚಲ ಸ್ಥಿತಿಯ ಆಸನದ ಮೇಲೆ ಏಕಾಗ್ರತೆಯಿಂದ ಕುಳಿತುಕೊಳ್ಳುವ ಅಭ್ಯಾಸವೇ ನನ್ನನ್ನು ಭವಿಷ್ಯ ಸಿಂಹಾಸನಾಧಿಕಾರಿಯನ್ನಾಗಿ ಮಾಡುತ್ತಿದೆ.

20. ನಾನು ಚಿಕ್ಕ, ದೊಡ್ಡ ಪರಿಸ್ಥಿತಿಗಳಲ್ಲಿ ಶಕ್ತಿಯನ್ನು ಸಮಯಾನುಸಾರ ಉಪಯೋಗಿಸುತ್ತಿದ್ದೇನೆ.

21. ನಾನು ವರ್ತಮಾನ ಸಮಯವನ್ನು, ಪ್ರತಿಯೊಂದು ಶಕ್ತಿಯನ್ನು, ಪ್ರತಿಯೊಂದು ಗುಣವನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

22. ನಾನು ಶಕ್ತಿಹೀನ ಆತ್ಮರಿಗೆ ನನ್ನ ಶಕ್ತಿಯ ಅನುಭೂತಿಗಳ ಸಹಾಯವನ್ನು ಕೊಟ್ಟು ಅನುಭವ ಮಾಡಿಸುವ ಅನುಭವೀ ಮೂರ್ತಿ.